ಮುನ್ನೂರು ಮನೆಗಳ ಊರು. ಸ್ವಾತಂತ್ರ್ಯ ಚಳವಳಿ ಸಂದರ್ಭದಲ್ಲಿ ಹೊಸಳ್ಳಿ ತುಂಬಾನೆ ಸಕ್ರಿಯವಾಗಿತ್ತು. ಈಚಲುಮರ ಕಡಿಯುವ ಚಳವಳಿಯಲ್ಲಿ ಊರಿನ ಅನೇಕರು ಭಾಗವಹಿಸಿ ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಲೀಡರುಗಳ ಗಮನ ಸೆಳೆದಿದರಂತೆ. ನಲವತ್ತೆರಡರ ಚಳವಳಿಯಲ್ಲಿ ಹೊಸಳ್ಳಿಯ ಮೂವತ್ತು ಮಂದಿ ದೇಶಪ್ರೇಮಿ ಹೋರಾಟಗಾರು ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿದ್ದರೆಂಬುದು ಆಗ ಮೈಸೂರು ಸೀಮೆಯಲ್ಲಿ ದೊಡ್ಡ ಸುದ್ದಿಯಾಗಿತ್ತಂತೆ. ಅವರೆಲ್ಲ ಬಳ್ಳಾರಿ ಜೈಲಿನಲ್ಲಿ ಟಿ. ಪ್ರಕಾಶಂ, ನಿಜಲಿಂಗಪ್ಪ, ನಾಗಿರೆಡ್ಡಿ, ಕಾಮರಾಜ್, ಎನ್.ಜಿ. ರಂಗಾ ಮೊದಲಾದ ದೇಶಪ್ರೇಮಿ ನಾಯಕರ ಜತೆಯಲ್ಲಿ ಮೂರು ತಿಂಗಳು ಇದ್ದು ಬಂದಿದ್ದರೆಂಬುದು ಹೊಸಳ್ಳಿಯ ಹೆಗ್ಗಳಿಕೆ.

ಸ್ವಾತಂತ್ರ್ಯ ಬಂದ ಮೇಲೆ ಹೊಸಳ್ಳಿ ಜನರಿಗೆ ದೇಶಪ್ರೇಮ ಎತ್ತಿ ತೋರುವ ಅವಕಾಶಗಳೇ ಇಲ್ಲವಾದವು. ಏನಾದರೂ ಒಳ್ಳೆಯ ಕೆಲಸ ಮಾಡಬೇಕೆಂದು ಊರಿನ ಸ್ವಾತಂತ್ರ್ಯ ಯೋಧರೆಲ್ಲ ಸೇರಿಕೊಂಡು 'ಖಾದಿ ಸೇವಾ ಕೇಂದ್ರ' ಆರಂಭಿಸಿದ್ದರು. ಆದರೆ ನೂಲುವ, ನೇಯುವ ಕೆಲಸಗಳು ಹೆಚ್ಚು ದಿನ ನಡೆಯಲಿಲ್ಲ. ಗಾಂಧೀಜಿ ಹೆಸರಿನಲ್ಲಿ ಏನಾದರೂ ಮಾಡಬೇಕೆಂಬುದು ಊರವರ ಆಸೆಯಾಗಿತ್ತು. ಆದರೆ ಅದಕ್ಕೆ ಸರಿಯಾದ ಅವಕಾಶ ಸಿಕ್ಕಿರಲಿಲ್ಲ. ಅದೇ ಸಮಯದಲ್ಲಿ ಊರ ಹುಡುಗರು ಹೈಸ್ಕೂಲು ಓದಿಗಾಗಿ ನಿತ್ಯವೂ ತಾಲ್ಲೂಕು ಕೇಂದ್ರಕ್ಕೆ ಬಸ್ಸಿನಲ್ಲಿ ಹೋಗಿ ಬರುವುದನ್ನು ನೋಡಲಾಗದೆ ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪನವರಿಗೆ ದುಂಬಾಲು ಬಿದ್ದು ಊರಿಗೊಂದು ಹೈಸ್ಕೂಲು ಮಂಜೂರು ಮಾಡಿಸಿಕೊಂಡಿದ್ದರು. ಮಂಜೂರಾತಿ ಸಿಕ್ಕಿದ್ದು ಕಳೆದ ಶತಮಾನದ ಅರವತ್ತರ ದಶಕದಲ್ಲಿ. ಊರ ಮುಖಂಡರು ಹೊಸಳ್ಳಿ ಸುತ್ತಲಿನ ಹದಿನೆಂಟು ಹಳ್ಳಿಗಳಲ್ಲಿ ಓಡಾಡಿ ಚಂದಾ ಎತ್ತಿ ಗಾಂಧೀಜಿ ಹೆಸರಿನಲ್ಲಿ ಹೈಸ್ಕೂಲು ಶುರು ಮಾಡಿದ್ದರು. ಆದರೆ ಮುಂದಿನ ಹತ್ತೇ ವರ್ಷಗಳಲ್ಲಿ ಅದನ್ನು ನಡೆಸಲಾಗದೆ, ಮೇಸ್ಟರುಗಳಿಗೆ ಸಂಬಳ ಕೊಡಲೂ ಆಗದೆ ಮತ್ತೆ ಮಂತ್ರಿಮಾನ್ಯರ ಕಾಲು ಹಿಡಿದು ಅದನ್ನು ಸರ್ಕಾರದ ಸುಪರ್ದಿಗೆ ಒಪ್ಪಿಸಿ ಕೈ ತೊಳೆದುಕೊಂಡಿದ್ದರು. ಆನಂತರ ಅದನ್ನು ಮರೆತುಬಿಟ್ಟರು! ಹೊಸಳ್ಳಿಯ ಬಗ್ಗೆ ಇಷ್ಟು ನಿಮಗೆ ಗೊತ್ತಿದ್ದರೆ ಸಾಕು.

ಇಂಥ ಘನ ಹಿನ್ನೆಲೆ ಇರುವ ಹೊಸಳ್ಳಿಗೂ ಈಗಿನ ಹೊಸಳ್ಳಿಗೂ ಹೋಲಿಕೆಯೇ ಇಲ್ಲ ಎನ್ನುವಷ್ಟು ಊರು ಬದಲಾಗಿದೆ. ಜಾಗತೀಕರಣದ ದುಷ್ಪರಿಣಾಮಗಳು ದೇಶದ ಹಳ್ಳಿಗಳ ಮೇಲೆ ಆಗುವುದಕ್ಕೆ ಸಾಕಷ್ಟು ಮೊದಲೇ ಹೊಸಳ್ಳಿಯಲ್ಲಿ ಅನೇಕ ಬದಲಾವಣೆಗಳಾದವು. ಸರ್ಕಾರ ಹೊಗೆಸೊಪ್ಪು ಬೆಳೆಯುವುದನ್ನು ನಿಷೇಧಿಸಿದ ಮೇಲೆ ಹೊಸಳ್ಳಿಯ ಆರ್ಥಿಕ ಶಕ್ತಿ ಸಂಪೂರ್ಣ ಕುಗ್ಗಿತು. ಬರುಬರುತ್ತ ಮಳೆ ಕಡಿಮೆಯಾಯಿತು. ಊರ ಸುತ್ತ ಇದ್ದ ತೆರೆದ ಬಾವಿಗಳೆಲ್ಲ ಒಂದೊಂದಾಗಿ ಒಣಗಿದವು. ರೈತರು ಅವುಗಳ ತಳದಲ್ಲೇ ಬೋರ್ವೆಲ್‌ಗಳನ್ನು ಕೊರೆಸಿ ಭೂಗರ್ಭದಲ್ಲಿ ಇದ್ದಬದ್ದ ನೀರನ್ನೆಲ್ಲ ಎತ್ತಿ ಬೇಸಾಯ ಮಾಡಿದ್ದರ ಪರಿಣಾಮವೊ ಏನೋ ಐದಾರು ವರ್ಷಗಳಲ್ಲಿ ಹೊಸಳ್ಳಿಯಲ್ಲಿ ಅಂತರ್ಜಲವೇ ಇಲ್ಲದಂತಾಯಿತು. ಈಗ ಕೆಲವೇ ಕೊಳವೆ ಬಾವಿಗಳಲ್ಲಿ ಅಲ್ಪಸ್ವಲ್ಪ ನೀರಿದೆ. ಆ ನೀರನ್ನೇ ಜೋಪಾನವಾಗಿ ಬಳಸಿಕೊಂಡು ಹಣ್ಣು, ತರಕಾರಿ ಬೆಳೆದು ಜೀವನ ನಡೆಸುವವರೂ ಊರಲ್ಲಿದ್ದಾರೆ.

'ಅಜ್ಜಿಕಟ್ಟೆ ಅಂಗಳದಲ್ಲಿ ಏಳೆಂಟು ವರ್ಷಗಳ ಹಿಂದೆ ಜಿಲ್ಲಾ ಪಂಚಾಯ್ತಿಯವರು ಕೊರೆಸಿದ ಮೂರು ಬೋರ್ವೆಲ್‌ಗಳಿಂದ ನಮ್ ಜೀವ ಉಳಿದಿದೆ... ಕಟ್ಟೆಯ ಉಪ್ಪು ನೀರೇ ಜನ ಮತ್ತು ದನಕರುಗಳಿಗೆ ಆಧಾರ. ಪಂಚಾಯ್ತಿಯವರು ವಾರಕ್ಕೆ ಎರಡು ಸಲ ನಲ್ಲಿ ಮೂಲಕ ನೀರು ಬಿಡ್ತಾರೆ. ಕರೆಂಟ್ ಹೋದರೆ, ಮೋಟರು ಕೆಟ್ಟರೆ ನಮ್ಮ ಸ್ಥಿತಿ ಯಾರಿಗೂ ಬೇಡ... ತಿಕ ತೊಳಿಯಕೂ ನೀರು ಇರಲ್ಲ' ಅಂತ ಊರ ಜನ ಸಂಕೋಚವಿಲ್ಲದೆ ಊರಿಗೆ ಬಂದವರ ಎದುರು ಹೇಳುತ್ತಾರೆ.

'ನಮ್ಮೂರಲ್ಲಿ ಪ್ರಾಯದ ಹುಡುಗರೇ ಇಲ್ಲ. ಅವರೆಲ್ಲ ಬೆಂಗಳೂರು, ಮಂಗಳೂರು, ಮಲೆಸೀಮೆಯ